ಶ್ರೀ ಆರ್.ರೋಶನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು).

ಅ) ಇಲ್ಲ

ಆ) ಸಧ್ಯಕ್ಕೆ ಈ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

ಪ್ರಾಚೀನ ಸ್ಮಾರಕಗಳ ರಕ್ಷಣೆ ಬಗ್ಗೆ

1671 (2329) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರಪೇಟೆ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಹಿಂದಿನ ರಾಜರುಗಳ ಗದ್ದಿಗೆಗಳು ಶಿಥಿಲವಾಗುತ್ತಿದ್ದು ಇವುಗಳು ಪ್ರಾಚೀನ ಸ್ಮಾರಕಗಳಾಗಿರುವುದರಿಂದ ಇವುಗಳನ್ನು ರಕ್ಷಿಸುವ ಹೊಣೆ ರಾಜ್ಯ ಸರ್ಕಾರದ್ದಲ್ಲವೆ;

ಆ) ಹಾಗಿದ್ದಲ್ಲಿ ಈ ಗದ್ದುಗೆಗಳ ರಕ್ಷಣೆಗಾಗಿ ಯಾವ ವಿಶೇಷ ಕ್ರಮ ಕೈಗೊಳ್ಳಲಾಗುವುದು;

ಇ) ಈ ಗದ್ದುಗೆಗಳ ಸುತ್ತ 2 ಕಿ.ಮೀ.ಜಮೀನಿನಲ್ಲಿ ನಿವೇಶನ ನಿರ್ಮಾಣ ರಚಿಸದಂತೆ ಪ್ರತಿ ಬಂಧಿಸಲಾಗುವುದೇ;

ಈ) ಮಡಿಕೇರಿ ಪುರಸಭೆ ಈ ಗದ್ದುಗೆಗಳ ಸುತ್ತ ನಿವೇಶನ ಮಂಜೂರು ಮಾಡಿದ್ದಕ್ಕೆ ಜನತೆ ಪ್ರತಿಭಟನೆ ಮಾಡಿದ್ದು ಈ ನಿವೇಶನಗಳನ್ನು ರದ್ದುಪಡಿಸಿ ಸ್ಮಾರಕಗಳನ್ನು ರಕ್ಷಿಸಲಾಗುವುದೆ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು).

ಅ) ಹೌದು

ಆ) ಪೂರ್ವಭಾವಿ ಕ್ರಮವಾಗಿ ಈ ಗದ್ದುಗೆಗಳ ರಕ್ಷಣೆಗಾಗಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯಿಂದ ಗದ್ದುಗೆಗಳ ಜಮೀನಿನ ಸುತ್ತ ಮುಳ್ಳುತಂತಿ ಬೇಲಿಯನ್ನು ಹಾಕಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ನಿಯಮದಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು.

ಈ) ಈ ಬಗ್ಗೆ ಮಡಿಕೇರಿ ಪುರಸಭೆಗೆ ನಿವೇಶನ ಮಂಜೂರಾತಿ ಮಾಡಿ ಪಟ್ಟಾಗಳನ್ನು ಸಾರ್ವಜನಿಕರಿಗೆ ವಿತರಿಸದಂತೆ ಈಗಾಗಲೇ ಸೂಚನೆ ನೀಡಲಾಗಿದೆ.

ರಾಜ್ಯದ ಅನೇಕ ಕಡೆಗಳಲ್ಲಿ ನಿರುಪಯುಕ್ತವಾದ ಅರಣ್ಯ

1672 (2144) ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನೇಕ ಕಡೆಗಳಲ್ಲಿ ಅರಣ್ಯಕ್ಕೆ ಸೇರಿದ ನಿರುಪಯುಕ್ತವಾದ (ಬೆಲೆ ಬಾಳುವ ಮರಗಳು ಹಾಗೂ ವನ್ಯಜೀವಿಗಳು ಇಲ್ಲದಿರುವುದು) ಜಾಗ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಎಷ್ಟು ಎಕರೆ ಇದೆ;